ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು

ಸಂಖ್ಯೆ:E-1035161-DPI-CPI0C7-2(USM)/3/2023-GRANT IN AID SEC

ದಿನಾಂಕ:16-03-2023.

: : ಜ್ಞಾಪನ : :

ವಿಷಯ: ಖಾಸಗಿ ಅನುದಾನಿತ/ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹೆಸರನ್ನು ಬದಲಾಯಿಸುವ ಪ್ರಾಧಿಕಾರವನ್ನು ವಿಕೇಂದ್ರಿಕರಿಸುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ: ಇಡಿ 28 ಪಿಜಿಸಿ 99,ದಿನಾಂಕ:27-12-1999.

2.ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಇಪಿ 46 ಪಿಜಿಸಿ 2023, ದಿನಾಂಕ:07-02-2023.

* * * * *

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಹೆಸರನ್ನು ಬದಲಾವಣೆ ಮಾಡುವ ಪ್ರಾಧಿಕಾರವನ್ನಾಗಿ ಉಪನಿರ್ದೇಶಕರು(ಆಡಳಿತ) ಇವರನ್ನು ಸರ್ಕಾರವು ಅಧಿಸೂಚಿಸಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಇಡಿ 28 ಪಿಜಿಸಿ 99, ದಿನಾಂಕ:27-12-1999 ರಲ್ಲಿ ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಹೆಸರು ಬದಲಾವಣೆ ಮಾಡುವ ಬಗ್ಗೆ ನಿರ್ದೇಶಕರು (ಪ್ರಾಥಮಿಕ / ಪ್ರೌಢ ) ಮತ್ತು ಅಪರ ಆಯುಕ್ತರ ಕಛೇರಿಯ ನಿರ್ದೇಶಕರಿಗೆ ಪ್ರತ್ಯಾಯೋಜಿಸಲಾಗಿತ್ತು. ಸದರಿ ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ, ಸದರಿ ಆದೇಶದಲ್ಲಿನ ಷರತ್ತುಗಳೊಂದಿಗೆ ಶಾಲೆ ಹೆಸರು ಬದಲಾವಣೆ ಬಗ್ಗೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ:07-02-2023ರಲ್ಲಿ ಆದೇಶಿಸಿರುವಂತೆ ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಹೆಸರನ್ನು ಬಲಾಯಿಸುವ ಅಧಿಕಾರವನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಅಧಿಸೂಚಿಸಿರುತ್ತಾರೆ. ಅದರಂತೆ

**ಆದೇಶ:-**

ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಹೆಸರು ಬದಲಾವಣೆ ಪ್ರಾಧಿಕಾರವನ್ನು ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

| ಕ್ರ.ಸಂ | ಪ್ರಸ್ತುತ ನೋಂದಣಿ ಪ್ರಾಧಿಕಾರ | ಪರಿಷ್ಕೃತ ನೋಂದಣಿ ಪ್ರಾಧಿಕಾರ |
|---|---|---|
| 1 | ಬೆಂಗಳೂರು / ಮೈಸೂರು ವಿಭಾಗ<br>ನಿರ್ದೇಶಕರು(ಪ್ರಾಥಮಿಕ)<br>ನಿರ್ದೇಶಕರು(ಪ್ರೌಢ ಶಿಕ್ಷಣ) | ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) |
| 2 | ಕಲಬುರ್ಗಿ / ಧಾರವಾಡ<br>ವಿಭಾಗದ ನಿರ್ದೇಶಕರು | |

ಮೇಲಿನಂತೆ ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಹೆಸರು ಬದಲಾವಣೆ ಮಾಡುವ ಪ್ರಾಧಿಕಾರಗಳನ್ನು ಸರ್ಕಾರದ ಅಧಿಕೃತ ಜ್ಞಾಪನ ಪತ್ರದಂತೆ ಅಧಿಸೂಚಿಸಲಾಗಿದ್ದು, ಶಾಲೆ ಹೆಸರು ಬದಲಾವಣೆ ಕುರಿತಂತೆ ಇನ್ನು ಮುಂದೆ ಸಂಬಂಧಿಸಿದ ಪ್ರಾಧಿಕಾರಗಳಲ್ಲಿ ಮನವಿ ಸಲ್ಲಿಸಬಹುದಾಗಿರುತ್ತದೆ.

ಆಯುಕರು.

ಗೆ,

1.ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ ವಿಭಾಗ ಸೂಕ್ತ ಕ್ರಮಕ್ಕಾಗಿ.
3. ನಿರ್ದೇಶಕರು(ಪ್ರೌಢ ಶಿಕ್ಷಣ) / ನಿರ್ದೇಶಕರು( ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು.
4. ನಿರ್ದೇಶಕರು, ಕಲಬುರ್ಗಿ ಮತ್ತು ಧಾರವಾಡ ಅಪರ ಆಯುಕ್ತಾಲಯ, ಸಾ.ಶಿ.ಇ.
5. ಅಧೀನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, (ಪ್ರಾಥಮಿಕ / ಪ್ರೌಢಶಿಕ್ಷಣ) ಬಹುಮಹಡಿಗಳಕಟ್ಟಡ ಬೆಂಗಳೂರು.
6. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ವೆಬ್ ಸೈಟ್ ನಲ್ಲಿ ಪ್ರಕಟಿಸುವುದಕ್ಕಾಗಿ.
8. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ ೨೮ ಪಿಜಿಸಿ ೯೯

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: ೨೭-೧೨-೯೯.

**ಅಧಿಕೃತ ಜ್ಞಾಪನ.**

ವಿಷಯ: ಖಾಸಗಿ ಅನುದಾನಿತ:ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹೆಸರನ್ನು ಬದಲಾಯಿಸುವ ಬಗ್ಗೆ.

- ೦ -

ಸರ್ಕಾರಿ ಶಾಲೆಗಳ ಹೆಸರುಗಳನ್ನು ಬದಲಾಯಿಸುವ ಬಗ್ಗೆ ಸರ್ಕಾರ ತನ್ನ ಆದೇಶ ಸಂಖ್ಯೆ:ಇಡಿ ೧೫೮ ಯೋಸಕ ೮೯ ದಿನಾಂಕ: ೧೧-೯-೧೯೮೯ ರಲ್ಲಿ ಆದೇಶ ಹೊರಡಿಸಿದ್ದು ಸದರಿ ಆದೇಶದನ್ವಯ ಕರ್ನಾಟಕ ರಾಜ್ಯ ವಿದ್ಯಾ ಸಂಸ್ಥೆಗಳಿಗೆ ದಾನಿಗಳು ದಾನವನ್ನು ಕೊಟ್ಟಲ್ಲಿ, ಅಂಥಹ ದಾನಿಗಳ ಸೂಚಿಸುವ ಹೆಸರುಗಳನ್ನು ಸಂಸ್ಥೆಯ ಆಯಾ ವಿಭಾಗಕ್ಕೆ ನಾಮಕರಣ ಮಾಡಲು ಕೆಲವು ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲು ಆದೇಶಿಸಿದೆ. ಈ ಆದೇಶವು ಸರ್ಕಾರಿ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ. ಅಂತೆಯೇ ಖಾಸಗಿ ಶಾಲೆಗಳ ಹೆಸರುಗಳನ್ನು ಬದಲಾಯಿಸುವಲ್ಲಿ ಸಹ ಅನುಸರಿಸಬೇಕಾದ ನಿಯಮ:ಮಾರ್ಗಸೂಚಿಗಳ ಬಗ್ಗೆ ಸರ್ಕಾರ ಪರಿಶೀಲಿಸಿದೆ.

ಮೇಲೆ ವಿವರಿಸಿರುವ ಸನ್ನಿವೇಶದಲ್ಲಿ ಖಾಸಗಿ ಪ್ರಾಥಮಿಕ:ಪ್ರೌಢ ಶಾಲೆಗಳ ಹೆಸರುಗಳನ್ನು ಬದಲಾಯಿಸಿಕೊಳ್ಳಲು ಅಂತಹ ಸಂಸ್ಥೆಗಳಿಂದ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಶೀಲಿಸಿ ಸಂಬಂಧಿತ ನಿರ್ದೇಶಕರು (ಪ್ರಾಥಮಿಕ:ಪ್ರೌಢ) ರವರು ಸೂಕ್ತ ಆದೇಶವನ್ನು ಹೊರಡಿಸಬಹುದೆಂದು ಸೂಚಿಸಲಾಗಿದೆ:-

೧) ಹೆಸರು ಬದಲಾವಣೆ ಬಗ್ಗೆ ಉದ್ದೇಶ ಹಾಗೂ ಯಾವ ಹೆಸರಿಗೆ ಬದಲಾಯಿಸಬೇಕೆಂಬ ಬಗ್ಗೆ ಆಡಳಿತ ಮಂಡಳಿ ಠರಾವು ಮಾಡಿ ಸದರಿ ಠರಾವನ್ನು ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಸಹಿ ಮಾಡಿದ ಪ್ರತಿಯನ್ನು ರೂಪಾಯಿ ೧೫೦.೦೦ : ಛಾಪಾ ಕಾಗದದಲ್ಲಿ ಒದಗಿಸಬೇಕು.

೨) ಸದರಿ ಆಡಳಿತ ಮಂಡಳಿಯು ಹೆಸರು ಬದಲಾವಣೆ ಪ್ರಸ್ತಾವನೆಯನ್ನು ಪರಿಗಣಿಸಿದ ನಂತರ ಶಾಲೆಯ ಹಳೆಯ ಹೆಸರನ್ನು ಅದರ ವಿಳಾಸದೊಂದಿಗೆ ರದ್ದುಪಡಿಸತಕ್ಕದ್ದು ಹಾಗೂ ಶಾಲೆಯ ಬದಲಾದ ಹೆಸರು ಹಾಗೂ ವಿಳಾಸದ ಬಗ್ಗೆ ಮತ್ತು ಬದಲಾದ ಹೆಸರಿನ ಶಾಲೆಯ ಆಡಳಿತ ಮಂಡಳಿಯು ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಶನ್ ಕಾಯಿದೆಯಡಿಯಲ್ಲಿನ ರಿಜಿಸ್ಟರ್ ಸಂಖ್ಯೆ ಮತ್ತು ಶಿಕ್ಷಣ ಕಾಯ್ದೆಯ ಅಡಿಯಲ್ಲಿನ ರಿಜಿಸ್ಟ್ರೇಶನ್ ಸಂಖ್ಯೆ ಸದಸ್ಯರುಗಳ ಹೆಸರು ಈ ವಿವರಣೆಯನ್ನು ಒಳಗೊಂಡ ಆದೇಶವನ್ನು ಹೊರಡಿಸತಕ್ಕದ್ದು.

೩) ಸದರಿ ಆದೇಶದಲ್ಲಿ ಪ್ರಸ್ತುತ ಅಧಿಕೃತ ಜ್ಞಾಪನಾ ಸಂಖ್ಯೆ ಹಾಗೂ ದಿನಾಂಕದ ಪ್ರಕಾರ ಪರಿಗಣಿಸಿ ಆದೇಶಿಸಿರುವ ಬಗ್ಗೆ ನಿರ್ದೇಶಕರು ಸ್ಪಷ್ಟ ಮಾಡಿ ಹೊರಡಿಸಿರುವ ಜ್ಞಾಪನದಲ್ಲಿ ನಮೂದಿಸತಕ್ಕದ್ದು.

೪) ಶಾಲೆಯ ಹೊಸ ಹೆಸರನ್ನು ಶಿಕ್ಷಣ ಕಾಯ್ದೆಯಡಿಯಲ್ಲಿನ ರಿಜಿಸ್ಟ್ರೇಶನ್ ನಿಯಮಗಳಡಿಯಲ್ಲಿ ರಿಜಿಸ್ಟರ್ ಮಾಡತಕ್ಕದ್ದು.

೫) ಕಾರ್ಯನಿರ್ವಾಹಕ ಮಂಡಳಿಯ ಠರಾವಿನ ಜೊತೆಗೆ ಸಂಸ್ಥೆಯ ಆಡಳಿತ ಮಂಡಳಿಯ ಠರಾವನ್ನು ಸಹ ಪರಿಶೀಲಿಸತಕ್ಕದ್ದು.

೬) ಆಡಳಿತ ದೃಷ್ಟಿಯಿಂದ ಶಾಲೆಯ ಹೆಸರನ್ನು ಒಂದುಬಾರಿ ಮಾತ್ರ ಬದಲಾಯಿಸತಕ್ಕದ್ದು. ಒಂದು ವೇಳೆ ಆಡಳಿತ ಮಂಡಳಿಯು ಪದೇ ಪದೇ ಹೆಸರು ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅದನ್ನು ಪರಿಗಣಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ
(ಬಿ.ವಿ.ಎಸ್.[illegible])
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

([illegible])

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು.

ಸಂಖ್ಯೆ:ಸಿ೭(೪) ಪ್ರಾಶಿಅ.ಇತರೆ ೫೮/೯೯-೨೦೦೦    ದಿನಾಂಕ: ೨೬-೨-೨೦೦೦.

ಆದೇಶದ

ಇಡಿ ೨೮ ಟಿಪಿಸಿ ೯೯ ದಿನಾಂಕ: ೨೬-೧೨-೯೯ ರ ಸರ್ಕಾರಿ ಪ್ರತಿಯನ್ನು ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿ ಹಾಗು ಸೂಕ್ತ ಕ್ರಮಕ್ಕಾಗಿ ಕಳಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಪ್ರತಿಯನ್ನು:-

೧) ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ;
೨) ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ;
೩) ಉಪ ನಿರ್ದೇಶಕರು ಪ್ರಾಥಮಿಕ ಅನುದಾನಿತ/ಪ್ರೌಢ ಶಿಕ್ಷಣ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ;
೪) ಸಂಪರ್ಕಾಧಿಕಾರಿಗಳು ಆಯುಕ್ತರ ಕಛೇರಿ;
೫) ಅನುದಾನಿತ ಪ್ರಾಥಮಿಕ ಶಾಲೆಯ ಅಧ್ಯಕ್ಷರು, ಎಲ್ಲಾ ಕಾರ್ಯನಿರ್ವಾಹಕರುಗಳಿಗೆ;
೬) ಅನುದಾನಿತ ಪ್ರೌಢ -- ,, -- -- ,, --
೭) ಕಛೇರಿ ಪ್ರತಿ.

ಮು:

ಸರ್ಕಾರಿ ಆದೇಶದ ಸಂಖ್ಯೆ: ಇಡಿ ೨೮/ಪಜಿಸಿ ೯೯ ದಿನಾಂಕ: ೨೭-೦೩-೯೯ರ ಪ್ರಕಾರ ಖಾಸಗಿ ಪ್ರಾಥಮಿಕ ಶಾಲೆಗಳ ಹೆಸರು ಬದಲಾಯಿಸಲು ರೂಪಿಸಿರುವ ನಮೂನೆ

೧. ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ :

೨. ಸಂಸ್ಥೆ ನೋಂದಣಿಯಾಗಿರುವ ಬಗ್ಗೆ ಪ್ರಮಾಣ ಪತ್ರ (ಪ್ರತಿ ಲಗತ್ತಿಸುವುದು) :

೩. ಆಡಳಿತ ಮಂಡಳಿಯವರ ಇತ್ತೀಚಿನ ಅನುಮೋದಿತ ಅಧಿಕೃತ ಪಟ್ಟಿ :

೪. ಅ. ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ :

ಆ. ಶಾಲೆಯ ಸ್ವರೂಪ :

೧. ಅನುದಾನಿತ :

೨. ಅನುದಾನರಹಿತ :

೩. ಶಾಶ್ವತ ಅನುದಾನ ರಹಿತ :

೫. ಅ. ಶಾಲೆಯ ಹೆಸರು ಬದಲಾವಣೆಗೆ ಕಾರಣ :

ಆ. ಹೆಸರು ಬದಲಾವಣೆಗೆ ಆಡಳಿತಮಂಡಳಿ ಠರಾವು ಮಾಡಿರುವರೆ? ಮಾಡಿದ್ದಲ್ಲಿ ಪ್ರತಿ ಲಗತ್ತಿಸುವುದು :

೬. ಹೆಸರು ಬದಲಾವಣೆ ಬಗ್ಗೆ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರು ೧೫-೦೦ ರೂ ಛಾಪಾ ಕಾಗದದಲ್ಲಿ ಠರಾವಿನ ಬಗ್ಗೆ ಬೆರಳಚ್ಚು ಮಾಡಿಸಿ ಎಲ್ಲಾ ಸದಸ್ಯರ ಸಹಿಯೊಂದಿಗೆ ನೋಟರಿ ರವರಿಂದ ದೃಢೀಕರಿಸಿದ ಮೂಲ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು :

೭. ಶಾಲೆಯಲ್ಲಿನ ಮಕ್ಕಳ ತರಗತಿವಾರು ದಾಖಲಾತಿ / ಹಾಜರಾತಿಯ ಬಗ್ಗೆ ಇತ್ತೀಚಿನ ಮಾಹಿತಿ :

| ತರಗತಿಗಳು | ದಾಖಲಾತಿ | ಹಾಜರಾತಿ |
|---|---|---|
| ೧. | | |
| ೨. | | |
| ೩. | | |
| ೪. | | |
| ೫. | | |
| ೬. | | |
| ೭. | | |
| ಒಟ್ಟು | | |

೮. ಶಾಲೆಯ ಇತ್ತೀಚಿನ ಮಾನ್ಯತೆ ನವೀಕರಣವಾದ ವರ್ಷ (ಪ್ರತಿ ಲಗತ್ತಿಸುವುದು) :

೯. ಶಾಲೆಯು ೧೯೮೩ರ ಕರ್ನಾಟಕ ಶಿಕ್ಷಣ ಕಾಯ್ದೆಯ ಪ್ರಕಾರ ನೋಂದಣಿ ಆಗಿದೆಯೇ ಆಗಿದ್ದಲ್ಲಿ ಪ್ರತಿ ಒದಗಿಸುವುದು.

೧೧. ಶಾಲೆಯ ಹೆಸರು ಬದಲಾವಣೆ ವಿಚಾರದಲ್ಲಿ ಆಡಳಿತ ಮಂಡಳಿಯಲ್ಲಿ ಏನಾದರೂ ವಾದ-ವಿವಾದ ಅಥವಾ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣವಿರುವುದೇ? ಇದ್ದಲ್ಲಿ ದಾಖಲೆಗಳೊಂದಿಗೆ ಪೂರ್ಣ ವಿವರ ನೀಡುವುದು. :

## ಘೋಷಣಾ ಪತ್ರ

ಶ್ರೀಮತಿ/ಶ್ರೀ ಆದ ನಾನು ರವರ ಪುತ್ರಿ/ಪುತ್ರ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ಈ ಮೇಲ್ಕಂಡ ನಮೂನೆಯಲ್ಲಿ ನೀಡಿರುವ ಎಲ್ಲಾ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಹಿ

ಅಧ್ಯಕ್ಷರು / ಕಾರ್ಯದರ್ಶಿ

(ಬಿಡಿ ಅಕ್ಷರಗಳಲ್ಲಿ ಹೆಸರು ಮೊಹರು)

ಸ್ಥಳ:

ದಿನಾಂಕ:

ಹೆಸರು ಬದಲಾವಣೆಗೆ ಸ್ಥಳ ಪರಿಶೀಲನಾ ಅಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳವರ ನಿಖರ ಅಭಿಪ್ರಾಯ. (ತಿರಸ್ಕರಿಸುವುದಾದರೆ ಸೂಕ್ತ ಕಾರಣ ನೀಡಬೇಕು) :

ಸಹಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು

______________ ತಾಲ್ಲೂಕು/ರೇಂಜ್

ಸ್ಥಳ:

ದಿನಾಂಕ:

ಹೆಸರು ಬದಲಾವಣೆ ಬಗ್ಗೆ ಉಪ ನಿರ್ದೇಶಕರ ನಿಖರ ಅಭಿಪ್ರಾಯ: (ತಿರಸ್ಕರಿಸುವುದಾದರೂ ಸಹ ಸೂಕ್ತ ಕಾರಣ ನೀಡಬೇಕು) :

ಜಿಲ್ಲೆ

ಸಹಿ

ಉಪ ನಿರ್ದೇಶಕರು

ಸಾರ್ವಜನಿಕ ಶಿಕ್ಷಣ ಇಲಾಖೆ

______________ ಜಿಲ್ಲೆ

ಸ್ಥಳ

ದಿನಾಂಕ